## ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ

## ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ


| | | | ಶೀರ್ಷಿಕೆ | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–4 |
| 1 – 3 | ಅರಿವು | : | ಚಿತ್ರ ನೋಡಿ ಉತ್ತರ ಹೇಳಿ ನೋಡೋಣ | 5–6 |
| 1 – 3 | ಅನುಭವ | : | ಅನುಭವದ ಮೂಲಕ ಚಿತ್ರ ಬರೆಯಿರಿ | 7 |
| 1 – 3 | ಅವಲೋಕನ | : | ಚರ್ಚಾಕೂಟ : "ನನ್ನ ಜವಾಬ್ದಾರಿ" | 8 |
| 4 – 5 | ಅರಿವು | : | ಅರಿಯೋಣ ಬನ್ನಿ | 9 |
| 4 – 5 | ಅನುಭವ | : | ಕ್ಷೇತ್ರ ಭೇಟಿ / ಬರವಣಿಗೆ ಮೂಲಕ ಅನುಭವ | 10 |
| 4 – 5 | ಅವಲೋಕನ | : | "ಸಾರ್ವಜನಿಕ ಕಟ್ಟಡಗಳನ್ನು ರಕ್ಷಿಸುವಲ್ಲಿ ನನ್ನ ಪಾತ್ರ" | 11 |
| 6 – 8 | ಅರಿವು | : | ನಾಗರಿಕನಾಗಿ ನನ್ನ ಪಾತ್ರ | 12 |
| 6 – 8 | ಅನುಭವ | : | ಗ್ರಾಮ ಭೇಟಿಯ ಮೂಲಕ ನೈಜ ಅನುಭವ | 13 |
| 6 – 8 | ಅವಲೋಕನ | : | ನಾನೇನು ಕಂಡೆ ? | 14 |
| | ಪ್ರತಿಜ್ಞೆ | | | 15 |
| | ಸಲಹಾತ್ಮಕ ಚಟುವಟಿಕೆಗಳು | | | 15 |

## ಹಿನ್ನೆಲೆ :

ಕೆಲವು ವರ್ಷಗಳ ಹಿಂದಕ್ಕೆ ನಮ್ಮ ಗಮನ ಹರಿಸಿದರೆ ಅಥವಾ ಇಂದಿನ ಹಿರಿಯರನ್ನು ಸಂದರ್ಶಿಸಿದರೆ ಗ್ರಾಮ ಸ್ವರಾಜ್ಯ ಕಲ್ಪನೆಗೆ ನಿಲುಕುವ ಒಂದಷ್ಟು ಸಾಮಾಜಿಕ ಜವಾಬ್ದಾರಿಯನ್ನು ಅನಕ್ಷರಸ್ಥರಾದ ನಮ್ಮ ಹಿರಿಯರು ಅನುಸರಿಸುತ್ತಿದ್ದದ್ದು ಕಾಣಸಿಗುತ್ತದೆ. ಉದಾಹರಣೆಗೆ, ಕೆರೆಯನ್ನು ಕಟ್ಟಬೇಕು ಹಾಗೂ ಕೆರೆಯ ನೀರನ್ನು ಮಾಲಿನ್ಯ ಮಾಡಬಾರದು ಅಥವಾ ಕೆರೆಯನ್ನು ರಕ್ಷಿಸಬೇಕು ಎಂಬ ಜಾಗೃತಿಯನ್ನು ಯಾರು ಸಹ ತಿಳಿಸುತ್ತಿರಲಿಲ್ಲ. ಆದರೆ ನಮ್ಮ ಹಿರಿಯರು ಪ್ರತಿ ಹಳ್ಳಿಗೂ ಒಂದು ಕೆರೆಯನ್ನು ಮಾಡುತ್ತಿದ್ದರು. ಯಾವುದೇ ರೀತಿಯ ಜಾಗೃತಿಯ ವೇದಿಕೆಗಳು, ನಿರ್ದೇಶನಗಳಿಲ್ಲದೆ ಪ್ರತಿ ವರ್ಷ ಹೂಳೆತ್ತುವ ಹಾಗೂ ರಕ್ಷಣೆಯ ಕಾರ್ಯಗಳನ್ನು ಮಾಡುತ್ತಿದ್ದರು. ಆದರೆ ಇಂದು ಸರ್ಕಾರದ/ಸಾರ್ವಜನಿಕ ಆಸ್ತಿ ಎಂದರೆ ಅದು ನಮ್ಮದಲ್ಲ, ಅದು ಆಳುವ ಸರ್ಕಾರದ ಜವಾಬ್ದಾರಿ ಎಂಬ ಭಾವನೆಗಳು ಇವೆ. ಹಾಗಾಗಿ ಆಯಾ ಸಮುದಾಯದಲ್ಲಿ ನಿರ್ಮಾಣವಾಗಿರುವ ಸಾರ್ವಜನಿಕ ಕಟ್ಟಡಗಳು, ಕೆರೆ, ನೀರಿನ ಮೂಲಗಳು ಇದೇ ರೀತಿಯ ಯಾವುದೇ ಸರ್ಕಾರದ ಕಟ್ಟಡಗಳು ಜನರ ಆಸ್ತಿ ಅದನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿ ಎಂಬ ಅರಿವಿನ ಕೊರತೆ ಕಡಿಮೆಯೇ ಎಂಬುದು ಸತ್ಯ ಸಂಗತಿಯಾಗಿದೆ. ಸಾರ್ವಜನಿಕ ಆಸ್ತಿಗಳು ಆಯಾ ಜನವಸತಿ ಪ್ರದೇಶದ ಜನರ ಆಸ್ತಿ ಹಾಗೂ ರಕ್ಷಿಸಿಕೊಳ್ಳುವುದು ಅವರ ಮೂಲಭೂತ ಕರ್ತವ್ಯವಾಗಿರಬೇಕೆಂದು ಇಂದಿನ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಈ ಸಂಭ್ರಮ ಶನಿವಾರ (ಬ್ಯಾಗ್ ರಹಿತ ದಿನ) ಸಾಕ್ಷಿಯಾಗಲಿ ಎಂದು ಆಶಿಸುತ್ತಾ ಈ ಚಟುವಟಿಕೆಯನ್ನು ಪ್ರಸ್ತಾಪಿಸಲಾಗಿದೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯೂಲ್ ಅನ್ನು ವಿನ್ಯಾಸಗೊಳಿಸಲಾಗಿದೆ ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮಾಡ್ಯೂಲ್ ಅನ್ನು ಕೆಳಕಂಡಂತೆ ಮೂರು ಘಟಕಗಳಾಗಿ ವಿಂಗಡಿಸಲಾಗಿದೆ.

1) ಅರಿವು
2) ಅನುಭವ
3) ಅವಲೋಕನ/ಪ್ರತಿಫಲನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್ ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಸಂರಚಿಸಲಾಗಿದೆ. ಈ ಕೈಪಿಡಿಯನ್ನು ಅಳವಡಿಸುವಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಒಂದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂದು ಖಚಿತಪಡಿಸಿಕೊಳ್ಳುವುದು.

- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸವಾದ ವಾತಾವರಣವಿರುವುದನ್ನು ಖಚಿತಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

### ಚಟುವಟಿಕೆ ಕೈಗೊಳ್ಳಲು ಅಗತ್ಯವಿರುವ ಪರಿಕರಗಳು

- ಮಿಂಚು ಪಟ್ಟಿಗಳು, ಚಿತ್ರಪಟಗಳು
- ಪ್ರೊಜೆಕ್ಟರ್(ಲಭ್ಯವಿದ್ದಲ್ಲಿ), ಲ್ಯಾಪ್‌ಟಾಪ್(ಲಭ್ಯವಿದ್ದಲ್ಲಿ)
- ಮಾದರಿಗಳು
- ಪ್ರಶ್ನಾಕಾರ್ಡ್‌ಗಳು, ಗೀತೆಯ ಕಾರ್ಡ್‌ಗಳು, ಕಥೆಗಳ ಕಾರ್ಡ್‌ಗಳು, ಇತ್ಯಾದಿ.




ಅರಿವು :

ತರಗತಿ 1–3 : (60 ನಿಮಿಷಗಳು)

# ಚಿತ್ರ ನೋಡಿ ಉತ್ತರ ಹೇಳಿ ನೋಡೋಣ
















**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5 ರಿಂದ 6 ಗುಂಪುಗಳಾಗಿ ಮಾಡುವುದು.
- ಪ್ರತಿ ಗುಂಪಿಗೂ ಈ ಮೇಲಿನ ಕಟ್ಟಡಗಳ ಚಿತ್ರಗಳನ್ನು ಮಿಂಚುಪಟ್ಟಿಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ನೀಡುವುದು.
- ನಂತರ ತುಂಡುಗಳಾದ ಚಿತ್ರಗಳನ್ನು ಜೋಡಿಸಿ ಅವುಗಳ ಬಗ್ಗೆ ಕೆಳಗಿನಂತೆ ಪ್ರಶ್ನೆ ಕೇಳುವುದರ ಮೂಲಕ ಅರಿವು ಮೂಡಿಸುವುದು.
  - ▲ ಈ ಕಟ್ಟಡಗಳು ನಿಮ್ಮ ಊರಿನಲ್ಲಿ ಎಲ್ಲಿ ಕಾಣಸಿಗುತ್ತವೆ?
  - ▲ ಅವುಗಳಿಂದ ನಮಗೆ ಆಗುವ ಉಪಯೋಗಗಳು ಏನು?
- ನಿರೂಪಕರು ಮಕ್ಕಳು ನೀಡಿದ ಪ್ರತಿಕ್ರಿಯೆಗಳನ್ನು ಕ್ರೋಢೀಕರಿಸಿ, ಅಭಿನಂದಿಸಿ ಅರಿವು ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

ಅನುಭವ :

ತರಗತಿ 1–3 : (60 ನಿಮಿಷಗಳು)

# ಅನುಭವದ ಮೂಲಕ ಚಿತ್ರ ಬರೆಯಿರಿ




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಒಟ್ಟು ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5 ರಿಂದ 6 ಗುಂಪುಗಳಾಗಿ ಮಾಡುವುದು.
- ನಿರೂಪಕರು ಪ್ರತಿ ಗುಂಪಿಗೆ ಚಿತ್ರ ಬಿಡಿಸಲು ಸಲಕರಣೆಗಳನ್ನು ನೀಡುವುದು {ಬಿಳಿಹಾಳೆ, ಸ್ಕೆಚ್ ಪೆನ್ನುಗಳು, ಇತ್ಯಾದಿ.}
- "ನನ್ನ ಕನಸಿನ ಊರು" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಗುಂಪಿನಲ್ಲಿ ಒಂದು ಚಿತ್ರವನ್ನು ಬಿಡಿಸಲು ಅವಕಾಶ ನೀಡುವುದು. ಅಂದರೆ ತಂಡದ ಸದಸ್ಯರು ಅವರ ಊರಿನಲ್ಲಿ ನೋಡಿರುವ ವಿವಿಧ ರೀತಿಯ ಕಟ್ಟಡಗಳನ್ನು ಬಿಡಿಸಲು ತಿಳಿಸಬೇಕು.
- ಚಿತ್ರ ಬಿಡಿಸಿದ ನಂತರ ಪ್ರತಿ ಗುಂಪಿನಿಂದ ತಾವು ಬಿಡಿಸಿದ ಚಿತ್ರದ ಬಗ್ಗೆ ಮಾಹಿತಿ ಅವರಿಂದ ಕೇಳಿ ಪಡೆಯುವುದು.
- ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ, ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

ಅವಲೋಕನ :

ತರಗತಿ 1–3 : (60 ನಿಮಿಷಗಳು)

# ಚರ್ಚಾಕೂಟ : “ನನ್ನ ಜವಾಬ್ದಾರಿ”



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**


- ಚಟುವಟಿಕೆಯ ನಿರೂಪಕನು ಪ್ರತಿತಂಡದ ಸದಸ್ಯರಿಗೆ “ಊರಿನಲ್ಲಿರುವ ವಿವಿಧ ರೀತಿಯ ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸುವಲ್ಲಿ ನನ್ನ ಪಾತ್ರ” ಎಂಬ ವಿಚಾರವನ್ನು ಈಗಾಗಲೇ ಅರಿತು ಅನುಭವಿಸಿದಂತೆ ಅಭಿವ್ಯಕ್ತಿಸುವಂತೆ ತಿಳಿಸುವುದು.
- ಸಾರ್ವಜನಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ಚರ್ಚಾಂಶಗಳನ್ನು ನೀಡಿ ಪ್ರತಿ ಗುಂಪಿನ ಸದಸ್ಯರಿಂದ ಮಾಹಿತಿ ಹೇಳಿಸುವುದು. ಉದಾಹರಣೆಗೆ :– "ಸಾರ್ವಜನಿಕ ಕಟ್ಟಡಗಳನ್ನು ರಕ್ಷಿಸುವಲ್ಲಿ ನನ್ನ ಪಾತ್ರ" (ಇನ್ನಿತರ ಚರ್ಚಾಂಶಗಳನ್ನು ನೀಡಬಹುದು)
- ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಗೆ ಸಿದ್ದಗೊಳಿಸುವುದು.

ಅರಿವು :

ತರಗತಿ 4–5 :

# ಅರಿಯೋಣ ಬನ್ನಿ

(60 ನಿಮಿಷಗಳು)




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5 ರಿಂದ 6 ಗುಂಪುಗಳಾಗಿ ಮಾಡುವುದು.
- ಚಟುವಟಿಕೆಯ ನಿರೂಪಕನು ಪ್ರತಿ ಗುಂಪಿಗೆ ಒಂದು ಸಾರ್ವಜನಿಕ ಕಟ್ಟಡದ ಹೆಸರನ್ನು ನೀಡುವುದು.
- ನಂತರ ಯಾವುದು, ಎಲ್ಲಿ, ಯಾವಾಗ, ಯಾಕೆ, ಯಾರು, ಹೇಗೆ ಎಂದು ಬರೆದಿರುವ 5 ಮಿಂಚುಪಟ್ಟಿಗಳನ್ನು ಪ್ರತಿ ಗುಂಪಿಗೆ ನೀಡುವುದು.
- ಆಯಾ ಗುಂಪಿನ ನಾಯಕ ತಮ್ಮ ಗುಂಪಿಗೆ ನೀಡಿರುವ ಕಟ್ಟಡಗಳ ಬಗ್ಗೆ ಮಿಂಚುಪಟ್ಟಿಯಲ್ಲಿರುವ ಪ್ರಶ್ನೆಗಳಿಗೆ ಅನುಗುಣವಾಗಿ ತಮಗೆ ತಿಳಿದ ಮಾಹಿತಿಯನ್ನು ಹೇಳುವಂತೆ ಪ್ರೋತ್ಸಾಹಿಸುವುದು. ಸಾರ್ವಜನಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ನೀಡಿರುವ ಅಂಶಗಳ ಕುರಿತು ಪ್ರತಿ ಗುಂಪಿನ ಸದಸ್ಯರಿಂದ ಮಾಹಿತಿ ಹೇಳಿಸುವುದು.
- ನಿರೂಪಕನು ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಅರಿವು ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.



'ಮಂತ್ರಿ ಇಲ್ಲದ ರಾಜ್ಯ ಕೀಲು ಮುರಿದ ಯಂತ್ರದಂತೆ'

ಅನುಭವ :

ತರಗತಿ 4–5 : (60 ನಿಮಿಷಗಳು)

# ಕ್ಷೇತ್ರ ಭೇಟಿ / ಬರವಣಿಗೆ ಮೂಲಕ ಅನುಭವ



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಒಟ್ಟು ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5 ರಿಂದ 6 ಗುಂಪುಗಳಾಗಿ ಮಾಡುವುದು.
- ನಿರೂಪಕನು ಪ್ರತಿ ಗುಂಪನ್ನು ಗ್ರಾಮದಲ್ಲಿರುವ ಸಾರ್ವಜನಿಕ ಆಸ್ತಿಗಳ ಸ್ಥಿತಿಗತಿಗಳನ್ನು ಅರಿಯಲು ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಪ್ರತ್ಯಕ್ಷ ಭೇಟಿಗೆ ಕಳುಹಿಸುವುದು.
- ಅಥವಾ "ನನ್ನ ಕನಸಿನ ಗ್ರಾಮ" ಎಂಬ ವಿಚಾರದ ಬಗ್ಗೆ ಪ್ರಬಂಧವನ್ನು ಗುಂಪಿನಲ್ಲಿ ಚರ್ಚಿಸಿ ಬರೆಯುವಂತೆ ಹೇಳುವುದು.
- ಕ್ಷೇತ್ರ ಭೇಟಿಯಲ್ಲಿ ಮುಖ್ಯವಾದ ಅಂಶಗಳನ್ನು, ಅವುಗಳ ಸ್ಥಿತಿಗತಿಗಳನ್ನು, ಅವುಗಳ ಸ್ಥಿತಿಗೆ ಕಾರಣವಾದ ಅಂಶಗಳನ್ನು ಬರೆದು ತರುವಂತೆ ಹೇಳುವುದು. ನಂತರ ಗುಂಪಿನಲ್ಲಿ ಚರ್ಚಿಸಿ ಬರೆಯುವಂತೆ ಹೇಳುವುದು.
- ಕ್ಷೇತ್ರ ಭೇಟಿಯಲ್ಲಿ ಮಕ್ಕಳು ಪಡೆಯುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.




‘ಸಾಧನೆಯ ಹಾದಿಯಲ್ಲಿ ಸೋಲುಗಳು ಬಂದರೆ, ಊಟದಲ್ಲಿ ಕಲ್ಲುಗಳು ಬಂದಂತೆ, ಊಟದಲ್ಲಿನ ಕಲ್ಲುಗಳನ್ನು ತೆಗೆಯಬೇಕೇ ವಿನಃ ಊಟವನ್ನೇ ಬಿಡಬಾರದು’

**ಅವಲೋಕನ :**

**ತರಗತಿ 4–5 :** **(60 ನಿಮಿಷಗಳು)**

## "ಸಾರ್ವಜನಿಕ ಕಟ್ಟಡಗಳನ್ನು ರಕ್ಷಿಸುವಲ್ಲಿ ನನ್ನ ಪಾತ್ರ"





**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ನಿರೂಪಕನು ಪ್ರತಿತಂಡದ ಸದಸ್ಯರಿಗೆ ಊರಿನಲ್ಲಿರುವ ವಿವಿಧ ರೀತಿಯ ಸಾರ್ವಜನಿಕ ಆಸ್ತಿಗಳ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡಿ ಪ್ರತಿಯೊಬ್ಬರೂ ಒಂದೊಂದು ಅಂಶವನ್ನು ಹೇಳುವಂತೆ ತಿಳಿಸುವುದು.
- ಸಾರ್ವಜನಿಕ ಆಸ್ತಿಗಳು ಹಾಳಾಗಲು ಅಥವಾ ಉತ್ತಮವಾಗಿರಲು ಮುಖ್ಯ ಕಾರಣಗಳನ್ನು ಅಭಿವ್ಯಕ್ತಿಸುವಂತೆ ತಿಳಿಸುವುದು.
- ಅಥವಾ ಪ್ರಬಂಧ ಬರೆಯುವುದರಲ್ಲಿ, ಪ್ರಬಂಧದಲ್ಲಿ ಚರ್ಚಿಸಿದ ಅಂಶಗಳನ್ನು ಮಂಡಿಸುವಂತೆ ಅವಕಾಶ ಕಲ್ಪಿಸುವುದು.
- ಸಾರ್ವಜನಿಕ ಆಸ್ತಿ ರಕ್ಷಣೆಯಲ್ಲಿ ನನ್ನ ಜವಾಬ್ದಾರಿ ಏನು? ಎಂಬುದನ್ನು ಹೇಳುವಂತೆ ತಿಳಿಸುವುದು.
- ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಗೆ ಸಿದ್ಧಗೊಳಿಸುವುದು.

## ಅರಿವು :

**ತರಗತಿ 6–8 :** (60 ನಿಮಿಷಗಳು)




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಒಟ್ಟು ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5 ರಿಂದ 6 ಗುಂಪುಗಳಾಗಿ ಮಾಡುವುದು.
- ಚಟುವಟಿಕೆಯ ನಿರೂಪಕನು ಪ್ರತಿ ಗುಂಪಿಗೆ ಒಂದು ಸಾರ್ವಜನಿಕ ಕಟ್ಟಡದ ಹೆಸರನ್ನು ನೀಡುವುದು.
- ನಂತರ ಯಾವುದು, ಎಲ್ಲಿ, ಯಾವಾಗ, ಯಾಕೆ, ಯಾರು, ಹೇಗೆ ಎಂದು ಬರೆದಿರುವ 5 ಮಿಂಚುಪಟ್ಟಿಗಳನ್ನು ಪ್ರತಿ ಗುಂಪಿಗೆ ನೀಡುವುದು. ಆ ಗುಂಪಿನ ನಾಯಕ ತಮ್ಮ ಗುಂಪಿಗೆ ನೀಡಿರುವ ಕಟ್ಟಡಗಳ ಬಗ್ಗೆ ಮಿಂಚುಪಟ್ಟಿಯಲ್ಲಿರುವ ಪ್ರಶ್ನೆಗಳಿಗೆ ಅನುಗುಣವಾಗಿ ತಮಗೆ ತಿಳಿದ ಮಾಹಿತಿಯನ್ನು ಹೇಳುವಂತೆ ಪ್ರೋತ್ಸಾಹಿಸುವುದು.
- ಸಾರ್ವಜನಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ಅಂಶಗಳನ್ನು ನೀಡಿ ಪ್ರತಿ ಗುಂಪಿನ ಸದಸ್ಯರಿಂದ ಮಾಹಿತಿ ಹೇಳಿಸುವುದು. ಅವುಗಳ ಉಪಯೋಗಗಳನ್ನು ತಿಳಿಸುವಂತೆ ಪ್ರೇರೇಪಿಸುವುದು.
- ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅರಿವು ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

ಅನುಭವ :

ತರಗತಿ 6–8 : (60 ನಿಮಿಷಗಳು)

# ಗ್ರಾಮ ಭೇಟಿಯ ಮೂಲಕ ನೈಜ ಅನುಭವ



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಒಟ್ಟು ವಿದ್ಯಾರ್ಥಿಗಳನ್ನು ಸನ್ನಿವೇಶಕ್ಕೆ ಅನುಗುಣವಾಗಿ 3–4 ಗುಂಪುಗಳಾಗಿ ಮಾಡುವುದು.
- ಚಟುವಟಿಕೆಯ ನಿರೂಪಕನು ಪ್ರತಿ ಗುಂಪನ್ನು ಗ್ರಾಮದಲ್ಲಿರುವ ಸಾರ್ವಜನಿಕ ಆಸ್ತಿಗಳ ಸ್ಥಿತಿಗತಿಗಳನ್ನು ಅರಿಯಲು ಪ್ರತ್ಯಕ್ಷ ಭೇಟಿಗೆ ಶಿಕ್ಷಕರ ಜವಾಬ್ದಾರಿಯಲ್ಲಿ ಕಳಿಸುವುದು.
- ಪ್ರತಿ ಗುಂಪು ತಮ್ಮ ಊರಿನಲ್ಲಿರುವ ಕಟ್ಟಡಗಳಿಗೆ ನೈಜವಾಗಿ ಭೇಟಿ ಮಾಡಿ ಆ ಕಟ್ಟಡಗಳ ಕಾರ್ಯವೈಖರಿಗಳ ಬಗ್ಗೆ ತಿಳಿಯುವ ಮೂಲಕ ಅನುಭವ ಪಡೆಯುವರು.
- ಕ್ಷೇತ್ರ ಭೇಟಿಯಲ್ಲಿ ಮುಖ್ಯವಾದ ಅಂಶಗಳನ್ನು, ಅವುಗಳ ಸ್ಥಿತಿಗತಿಗಳನ್ನು, ಅವುಗಳ ಸ್ಥಿತಿಗೆ ಕಾರಣವಾದ ಅಂಶಗಳನ್ನು ಚಿಕ್ಕದಾಗಿ ಬರೆದು ತರುವಂತೆ ಹೇಳುವುದು. ನಂತರ ಗುಂಪಿನಲ್ಲಿ ಚರ್ಚಿಸಿ ಬರೆಯುವಂತೆ ತಿಳಿಸುವುದು.
- ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

**ಅವಲೋಕನ :**

**ತರಗತಿ 6–8 :** **(60 ನಿಮಿಷಗಳು)**

## ನಾನೇನು ಕಂಡೆ ?



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ನಿರೂಪಕನು ಪ್ರತಿತಂಡದ ಸದಸ್ಯರಿಗೆ ಗ್ರಾಮ ಭೇಟಿಯಲ್ಲಿ ನೋಡಿದ ವಿವಿಧ ರೀತಿಯ ಸಾರ್ವಜನಿಕ ಆಸ್ತಿಗಳ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡಿ ಪ್ರತಿಯೊಬ್ಬರೂ ಒಂದೊಂದು ಅಂಶಗಳನ್ನು ಹೇಳುವಂತೆ ತಿಳಿಸುವುದು.
- ಸಾರ್ವಜನಿಕ ಆಸ್ತಿಗಳು ಹಾಳಾಗಲು ಅಥವಾ ಉತ್ತಮವಾಗಿರಲು ಮುಖ್ಯವಾದ ಕಾರಣಗಳನ್ನು ಅಭಿವ್ಯಕ್ತಿಸುವಂತೆ ತಿಳಿಸುವುದು.
- **ಅಥವಾ** ಪ್ರಬಂಧ ಬರೆದು, ಪ್ರಸ್ತಾಪಿಸಿದ ಅಂಶಗಳನ್ನು ಮಂಡಿಸುವಂತೆ ಅವಕಾಶ ಕಲ್ಪಿಸುವುದು.
- **ಅಥವಾ** "ಸಾರ್ವಜನಿಕ ಆಸ್ತಿ ಕಾಪಾಡುವಲ್ಲಿ ನಾಗರಿಕನಾಗಿ ನನ್ನ ಜವಾಬ್ದಾರಿ" ಎಂಬ ವಿಷಯದ ಬಗ್ಗೆ ಚರ್ಚೆ ಮಾಡಿಸುವುದು.
- ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ, ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಗೆ ಸಿದ್ಧಗೊಳಿಸುವುದು.



## ಪ್ರತಿಜ್ಞೆ

ಸಾರ್ವಜನಿಕ ಕಟ್ಟಡಗಳು ನಮ್ಮ ಆಸ್ತಿ. ನಮ್ಮ ಊರಿನ ಆಸ್ಪತ್ರೆ, ಶಾಲಾ ಕಟ್ಟಡ, ಗ್ರಾಮ ಪಂಚಾಯ್ತಿ, ಅಂಗನವಾಡಿ, ಕೆರೆಕಟ್ಟೆಗಳು, ರಸ್ತೆಗಳು ಮುಂತಾದವುಗಳು ಜನರಿಗೆ ಉಪಯೋಗವಾಗಲು ನಿರ್ಮಿಸಿರುವ ಸೌಕರ್ಯಗಳನ್ನು ಸರ್ಕಾರ ನಮ್ಮ ತೆರಿಗೆಯ ಹಣದಿಂದಲೇ ನಿರ್ಮಿಸಿದೆ. ಸಾರ್ವಜನಿಕ ಕಟ್ಟಡಗಳ ಉಪಯೋಗ ಪಡೆಯುವ ಹಕ್ಕು ನಮಗೆ ಇದೆ. ಹಾಗಾಗಿ ಹಕ್ಕನ್ನು ಪಡೆಯುವ ಮೊದಲು ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ.

1. ನಾಗರಿಕ ಕಟ್ಟಡಗಳು ಮತ್ತು ಸೌಕರ್ಯಗಳನ್ನು ನಾವು ಜವಾಬ್ದಾರಿಯಿಂದ ಉಪಯೋಗಿಸುತ್ತೇನೆ.
2. ಅವುಗಳನ್ನು ವಿರೂಪಗೊಳಿಸುವುದು, ಅವುಗಳ ಮೇಲೆ ಇದ್ದಿಲು, ಪೇಂಟ್‌ಗಳಿಂದ ಬರೆಯುವುದು, ಕಲ್ಲಿನಿಂದ ಹೊಡೆಯುವುದು, ಸುತ್ತಮುತ್ತಲಿನ ಪರಿಸರವನ್ನು ಮಲಿನ ಮಾಡುವುದು ನಾಗರೀಕ ಲಕ್ಷಣವಲ್ಲ ಎಂಬುದು ನನಗೆ ಅರಿವಿದೆ.
3. ನಾಗರೀಕ ಕಟ್ಟಡಗಳ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುತ್ತೇನೆ.
4. ಕಟ್ಟಡ ಮತ್ತು ಸೌಕರ್ಯಗಳನ್ನು ಇತರೆ ವ್ಯಕ್ತಿಗಳು ಹಾಳು ಮಾಡುತ್ತಿದ್ದಲ್ಲಿ ನನ್ನ ಊರಿನ ಹಿರಿಯರ ಮತ್ತು ಗ್ರಾಮ ಪಂಚಾಯ್ತಿಯ ಸದಸ್ಯರ ಗಮನಕ್ಕೆ ತರುತ್ತೇನೆ.
5. ಈ ದೇಶದ ಪ್ರಜ್ಞಾವಂತ ಪ್ರಜೆಯಾದ ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎಂದು ಭಾರತ ಮಾತೆಯನ್ನು ಮನದಲ್ಲಿ ನೆನೆದು ಪ್ರಮಾಣೀಕರಿಸುತ್ತೇನೆ.

ಇಂದು ನಾನು ಅರಿತುಕೊಂಡಿರುವ ವಿಷಯವನ್ನು ನನ್ನ ಸಹಪಾಠಿಗಳು, ಶಾಲೆಯ ಹೊರಗಿನ ಸ್ನೇಹಿತರು ಮತ್ತು ನನ್ನ ಕುಟುಂಬದ ಎಲ್ಲಾ ಸದಸ್ಯರೊಂದಿಗೆ ಹಂಚಿಕೊಂಡು ಈ ಪ್ರತಿಜ್ಞಾವಿಧಿಯನ್ನು ತಿಳಿಸಿ, ಅವರೂ ಕೂಡ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ವಿನಂತಿಸಿಕೊಳ್ಳುತ್ತೇನೆ.

### ಸಲಹಾತ್ಮಕ ಚಟುವಟಿಕೆಗಳು

**ನಾಗರೀಕ ಸೌಕರ್ಯಗಳು**

ಈ ದೇಶದ ಪ್ರಜೆಗಳಾದ ನಾವು ನಮ್ಮ ಊರಿನಲ್ಲಿರುವ ಸೌಕರ್ಯ ಮತ್ತು ಸೌಲಭ್ಯಗಳ ಜೊತೆ ನಾಡನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.


1. ನಿಮ್ಮ ಊರಿನಲ್ಲಿ ಕಂಡುಬರುವ ನಾಗರೀಕ ಸೌಕಯರ್ಗಳನ್ನು ಗುರುತಿಸಿ.
2. ನಾಗರೀಕ ಸೌಕರ್ಯಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಚರ್ಚಿಸಿ.
3. "ನಾಗರೀಕ ಸೌಕರ್ಯಗಳ ಸ್ವಚ್ಛತೆಗೆ ನಮ್ಮ ಪಾತ್ರ" ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಬಂಧ ರಚಿಸಿ.

# ನಾನು ಪೋಷಕನಾಗಿ....

## ನಾನು ಮೌನವನ್ನು ಮುರಿಯುತ್ತೇನೆ

ನಾನು ನನ್ನ ಮಗುವಿಗೆ ದೇಹದ ಎಲ್ಲಾ ಭಾಗಗಳನ್ನು ಹೆಸರಿಸಿ, ಸುರಕ್ಷಿತವಲ್ಲದ ಯಾವುದೇ ಸ್ಪರ್ಶವನ್ನು ಮಗು ನನಗೆ ತಿಳಿಸುವಂತೆ ಹೇಳಿಕೊಡುತ್ತೇನೆ.







## ನಾಚಿಕೆ ಬೇಡ, ಕಾಳಜಿ ಇರಲಿ







ದೇಹದ ಯಾವುದೇ ಭಾಗವು ನಾಚಿಕೆಪಡುವಂತದ್ದು ಅಥವಾ ಗಲೀಜು ಅಲ್ಲ ದೇಹದ ಪ್ರತಿಯೊಂದು ಭಾಗವನ್ನು ಶುಚಿಯಾಗಿ ಮತ್ತು ಆರೋಗ್ಯಕರವಾಗಿ ಇಡಬೇಕು

## ನಾನು ನನ್ನ ಮಗುವಿನ ಮೇಲೆ ನಂಬಿಕೆ ಇಡುತ್ತೇನೆ




ನಾನು ನನ್ನ ಮಗುವಿನ ಗೌಪ್ಯತೆಯನ್ನು ಕಾಪಾಡಿಕೊಂಡು, ಕಿರುಕುಳ ಕೊಟ್ಟವರನ್ನು ಹೆಸರಿಸಿ ಅವರು ಮಾಡಿದ ಕೆಲಸಕ್ಕೆ ನಾಚಿಕೆಯಾಗುವಂತೆ ಮಾಡುತ್ತೇನೆ. ನಾನು ಈ ದೌರ್ಜನ್ಯ ಮಾಡಿದವರನ್ನು ಎದುರಿಸುತ್ತೇನೆ ಮತ್ತು ಆ ಮನುಷ್ಯರ ಬಗ್ಗೆ ಮಾಹಿತಿಯನ್ನು ಜನರಲ್ಲಿ ಹರಡಿಸುತ್ತೇನೆ. ನನ್ನ ಮಗು ನನ್ನ ಮೊದಲ ಆದ್ಯತೆ.

ಮಕ್ಕಳಿಗೆ, ಯುವಕರಿಗೆ, ಯುವತಿಯರಿಗೆ ಮತ್ತು ಪೋಷಕರಿಗೆ ನಾವು ಜೀವನ ಕೌಶಲ್ಯಗಳು, ಮಾನವ ಲೈಂಗಿಕತೆ ಮತ್ತು ವೈಯಕ್ತಿಕ ಭದ್ರತೆಯ ಬಗ್ಗೆ ತರಬೇತಿಯನ್ನು ಕೈಗೊಳ್ಳುತ್ತೇವೆ.

enfold

www.enfoldindia.org